ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಶಿಕ್ಷಣ ಸಚಿವರಿಗೆ ಸ್ವಲ್ಪ ನೆನಪು ಮಾಡೋಣ ಎಂದು ಇದ್ದೇನೆ. ತಾವು ತಾಂತ್ರಿಕ ಶಿಕ್ಷಣದ ನಿರ್ದೇಶನಾಲಯದ ಬಗ್ಗೆ ಸೋಮವಾರ ಅಥವಾ ಮಂಗಳವಾರ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೀರಿ. ಅಕೌಂಟೆಂಟ್ ಜನರಲ್‌ರವರ ವರದಿ ನನ್ನ ಕಡೆಗೆ ಬಂದಿದೆ. ತಾವು ಏನು ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ಹೇಳಿಕೆ ತಯಾರಾಗಿ ಸೈಕ್ಲೋಸ್ಟೈಲ್‌ಗೆ ಹೋಗಿದೆ. ಅಲ್ಲಿಂದ ಬಂದ ಕೂಡಲೇ ಇವತ್ತು ಹೇಳಿಕೆ ನೀಡುತ್ತೇನೆ.

**ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮುಚ್ಚಲಾಗುವುದು.**

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆ ದಿನ ಶಿಕ್ಷಣ ಸಚಿವರು ಸದನ ನಡೆಯತಕ್ಕಂತಹ ಕಾಲದಲ್ಲಿ ನಾನು ಮತ್ತು ಬೈರೇಗೌಡರು, ಚಂದ್ರೇಗೌಡರು, ವಾಟಾಳ್ ನಾಗರಾಜ್‌ರವರು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮುಚ್ಚಿರತಕ್ಕಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಅವರನ್ನು ಕರೆದು ಮಾತನಾಡಿ ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುತ್ತೇನೆಂದು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು. ಇದರ ಪ್ರಗತಿ ಏನಾದರೂ ಆಗಿದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ವಿವರವಾಗಿ ಪರ್ಸನಲ್ ಆಗಿ ಕೂಡ ನಾನು ಅವರೊಂದಿಗೆ ಚರ್ಚೆ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ದಿನೇ ದಿನೇ ಗಂಭೀರವಾದ ಪರಿಸ್ಥಿತಿ ಉಲ್ಬಣವಾಗುತ್ತಿದೆ. ಇದರ ಬಗ್ಗೆ ಗಮನವಿಟ್ಟು ಪರಿಹಾರ ಮಾಡುವುದಾದರೆ ಮಾಡಬೇಕು. ನಿಧಾನ ಮಾಡಿದಷ್ಟೂ ಪರಿಸ್ಥಿತಿ ಅಶಾಂತವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗ ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳು ಸಮೀಪಿಸುತ್ತಿದೆ. ಅಲ್ಲಿ ಒಂದು ವಾರದಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವಿಚಾರದಲ್ಲಿ ನಿನ್ನೆ ಹೇಳಿದ ಪ್ರಕಾರ ಸುಮಾರು ಒಂದೂವರೆ ಗಂಟೆಗಳ ಕಾಲ ಶಿಕ್ಷಕರು ಶಿಕ್ಷಕೇತರ ಸಂಘದವರು ವಿದ್ಯಾರ್ಥಿಗಳು ಇವರನ್ನೆಲ್ಲಾ ಕರೆಸಿ ನಾನು ಮತ್ತು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಸಮಾಲೋಚನೆ ಮಾಡಿಯಾದ ಮೇಲೆ ಕುಲಪತಿಗಳಾದ ರಾಜ್ಯಪಾಲರ ಜೊತೆಯಲ್ಲಿ ಕೂಡ ಮಾತುಕತೆ ಮಾಡಿದ್ದೇನೆ. ಕುಲಪತಿಗಳೂ ಕೂಡ ಸಂಬಂಧಪಟ್ಟ ಸಂಘದವರನ್ನು ಕರೆಸಿ ಇವರ ಹತ್ತಿರ ಮಾತನಾಡಿದ್ದಾರೆ. ಉಪಕುಲಪತಿಗಳ ಜೊತೆಯಲ್ಲಿ ಅವರೂ ಮಾತನಾಡಿದ್ದಾರೆ, ನಾನೂ ಮಾತನಾಡಿದ್ದೇನೆ. ಸನ್ಮಾನ್ಯ ಕುಲಪತಿಗಳು ಈ ಬಗ್ಗೆ ಸಂಪೂರ್ಣ ವಿಚಾರ ಮಾಡಿ ನಮ್ಮ ಜೊತೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದರು.

*12.35 ಪಿ.ಎಂ.*

ಇದೆಲ್ಲ ಆದಮೇಲೆ ರಾತ್ರಿ ಪುನಃ ನಾನು ಅವರನ್ನು ಕರೆಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಚಾರಗಳನ್ನು ಮುಂದಿಟ್ಟಾಗ ಅವರು ಉಪಕುಲಪತಿಗಳನ್ನು ಅಮಾನತ್ತಿನಲ್ಲಿಡಬೇಕು ಅಥವಾ ಅವರಿಗೆ ರಜೆಯ ಮೇಲೆ ಹೋಗಲಿಕ್ಕೆ ಹೇಳಬೇಕು ಎಂದು ಹೇಳಿದರು. ಅವರು ಒಂದು ರೀತಿ ಒನ್ ಪಾಯಿಂಟ್ ಪ್ರೋಗ್ರಾಮ್ ಮಾಡಿದಹಾಗೆ ಮಾಡುತ್ತಿದ್ದಾರೆ. ಬಹುಶಃ ಅದು ಸಾಧ್ಯವಾಗುವುದಿಲ್ಲ, ತಮಗೆ ಗೊತ್ತಿದೆ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಕೂಡ ಡಿವಿಜನಲ್ ಕಮೀಷನರ್‌ರವರು ವಿಚಾರಣೆ ಮಾಡಿದ್ದಾರೆ. ಅವರು ವರದಿಯನ್ನು ಸಹ ಕೊಟ್ಟಿದ್ದಾರೆ. ಇಲ್ಲಿ ಹಾಗೆ ಮಾಡಿದರೆ ಅಲ್ಲಿಯೂ ಕೂಡ ಅಮಾನತ್ತಿನಲ್ಲಿಡಿಯೆಂದು ಒತ್ತಾಯ ಮಾಡುತ್ತಾರೆ, ಒಂದು ಮೆಮೋರಾಂಡಮ್ ಕೊಟ್ಟ ಕೂಡಲೇ ನಾವು ಉಪಕುಲಪತಿಗಳನ್ನು ಅಮಾನತ್ತಿನಲ್ಲಿಡುವುದಕ್ಕೆ

ಹೋದರೆ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯತ್ಯಾಸ ಆಗಬಹುದು, ಪ್ರತಿ ವಿಶ್ವವಿದ್ಯಾನಿಲಯದಲ್ಲಿ ಕ್ಯಾಂಪಸ್ ಅನ್‌ರೆಸ್ಟ್ ಪ್ರಾರಂಭವಾಗುತ್ತದೆ. ತನಿಖೆಯನ್ನು ಮಾಡಬಹುದು. ಅದಕ್ಕೆ ಕುಲಪತಿಗಳು ಸಿದ್ಧರಿದ್ದಾರೆ. ನಾವು ಅದರ ಬಗ್ಗೆ ಸಹಕಾರ ಮಾಡಬಹುದು. ತನಿಖೆಯನ್ನು ಯಾರಿಂದ ಬೇಕಾದರೂ ಮಾಡಬಹುದು. ಅಡಿಶನಲ್ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ಮಾಡಿಸಬಹುದು. ಮಾನ್ಯ ವಿಶ್ವನಾಥ್‌ರವರು ಇದ್ದಾರೆ. ಅವರು ವಿವಾದಗ್ರಸ್ತರಲ್ಲ. ಇದರ ಬಗ್ಗೆ ನಾನು ಅವರಿಗೆ ಹೇಳಿದ್ದೇನೆ. ಅವರು ಇಲ್ಲ, ಅಮಾನತ್ತಿನಲ್ಲಿಡಬೇಕೆಂದು ಪಟ್ಟು ಹಿಡಿದರೆ ಬಹುಶಃ ಪರೀಕ್ಷೆಗಳು ಹತ್ತಿರ ಬರುತ್ತಿವೆ ಮಕ್ಕಳ ಭವಿಷ್ಯ ಇದರಲ್ಲಿ ಇದೆ. ನಾನು ಆಗಲೇ ಹೇಳಿದ್ದೇನೆ, ತನಿಖೆ ಮಾಡುವುದಕ್ಕೆ ಒಂದೇ ತಿಂಗಳ ಅವಧಿ ಸಾಕು. ಒಂದು ತಿಂಗಳ ಅವಧಿಯಲ್ಲಿ ವರದಿ ತರಿಸಲಾಗುವುದು. ಆ ವರದಿಯಲ್ಲಿ ಉಪಕುಲಪತಿಗಳ ಬಗ್ಗೆ ಏನಾದರೂ ಲೋಪದೋಷಗಳು ಹೊರಗೆ ಬಂದರೆ ಅವರ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುವುದಿದ್ದರೆ ವಿಚಾರ ಮಾಡಬಹುದು. As a good gesture ಆ ಸಂಘಕ್ಕೆ ಸಂಬಂಧಪಟ್ಟ ಅಧ್ಯಕ್ಷರನ್ನು, ಸಿಂಡಿಕೇಟ್ ಅಥವಾ ಉಪಕುಲಪತಿಗಳು ಏನು ಅಮಾನತ್ತಿನಲ್ಲಿಟ್ಟಿದ್ದಾರೆ ಅದನ್ನು ಬೇಕಾದರೆ ತೆರವು ಮಾಡೋಣ.

ಶ್ರೀ ಹೆಚ್. ಏಕಾಂತಯ್ಯ : ಯಾರ್ಯಾರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ ಅವರೆಲ್ಲರ ಅಮಾನತ್ತನ್ನು ತೆರವು ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಅದು ಹಾಗೆ ಆಗುವುದಿಲ್ಲ. ಪ್ರಮುಖವಾಗಿ ಉಪಕುಲಪತಿಗಳ ಮೇಲೆ ಪತ್ರಿಕೆಯಲ್ಲಿ ಆರೋಪ ಮಾಡಿದರು ಎಂದು ಟೀಚಿಂಗ್‌ಸ್ಟಾಫ್ ಸಂಘದ ಅಧ್ಯಕ್ಷರನ್ನು ಮತ್ತು ನಾನ್ ಟೀಚಿಂಗ್ ಸ್ಟಾಫ್ ಸಂಘದ ಅಧ್ಯಕ್ಷರನ್ನು ಏನು ಅಮಾನತ್ತಿನಲ್ಲಿಟ್ಟಿದ್ದಾರೆ. That can be immediately vacated.

ಶ್ರೀ ವಾಟಾಳ್ ನಾಗರಾಜ್ : ಉಪಕುಲಪತಿಗಳ ಬಗ್ಗೆ ಯಾರು ಆರೋಪ ಮಾಡಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ.

SRI M.VEERAPPA MOILY : That can be done. ಆದರೆ ಅಡಿಶನಲ್ ಚೀಫ್ ಸೆಕ್ರೆಟರಿ ಮುಖಾಂತರ ಎನ್‌ಕ್ವಾಯರಿ ಮಾಡಲಿಕ್ಕೆ ಕುಲಪತಿಗಳು ಅನೌನ್ಸ್ ಮಾಡಬೇಕು. I am only intervening as a government. ಇಷ್ಟನ್ನು ಮಾಡಲಿಕ್ಕೆ ಸಿದ್ಧರಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ಉಪನ್ಯಾಸಕರು ಮತ್ತು ಟೀಚಿಂಗ್ ಸ್ಟಾಫ್ ಬರಬೇಕು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶಾಂತಿ, ನೆಮ್ಮದಿ ಕಾಪಾಡಲಿಕ್ಕೆ ವಿದ್ಯಾರ್ಥಿಗಳ ದೃಷ್ಟಿಯಿಂದ ಶಿಕ್ಷಣದ ದೃಷ್ಟಿಯಿಂದ ತಮ್ಮ ಮುಖೇನ ಮತ್ತು ಸದನದ ಮುಖಾಂತರ ಅವರಿಗೆ ವಿಶೇಷವಾದ ಕರೆಯನ್ನು ಕೊಡುತ್ತೇನೆ.

SRI D.B.CHANDRE GOWDA : We also point with the stand of the govt.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷಣಿಯವರೆ, ಒಂದು ನಿಮಿಷ. ನಾನು ನಿನ್ನೆ ವಿಧಾನಪರಿಷತ್‌ನಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಉತ್ತರ ಹೇಳಬೇಕಾಗಿತ್ತು ನಾನು ಅಲ್ಲಿದ್ದೆ. ಯಾವುದೇ ನೋಟೀಸ್ ಇಲ್ಲದೆ ಇದ್ದಕ್ಕಿದ್ದಹಾಗೆ ಬೆಂಗಳೂರು ನಗರದ ಕುಡಿಯುವ ನೀರಿನ ವಿಚಾರದಲ್ಲಿ ವಾಟಾಳ್ ನಾಗರಾಜ್‌ರವರು ಮತ್ತು ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ದೇಶಪಾಂಡೆಯವರು ಸಹ ಎತ್ತಿದ್ದಾರೆ. ಅವರ ಗಮನಸೆಳೆಯುವ ಸೂಚನೆಗೆ ನಾನು ಉತ್ತರ ಕೊಟ್ಟಿದ್ದೇನೆ. ವಾಟಾಳ್‌ನಾಗರಾಜ್‌ರವರು ಮಾತನಾಡುವಾಗ, ಕೆಲವು ಮಂತ್ರಿಗಳು ರೇಸ್ ಕೋರ್ಸ್‌ಗೆ ಹೋಗಿದ್ದಾರೆ ಹಾಗೆಂದು ಹೇಳಿದ್ದಾರೆ

ಶ್ರೀ ವಾಟಾಳ್‌ನಾಗರಾಜ್ : ಮಂತ್ರಿಗಳ ಬಗ್ಗೆ ನಾನು ಹೇಳಲಿಲ್ಲ. ಅಧಿಕಾರಿಗಳು ಇಲ್ಲಿ ಇಲ್ಲ, ಕುರ್ಚಿಗಳೆಲ್ಲ ಖಾಲಿ ಇದ್ದದ್ದರಿಂದ ಅವರು ಎಲ್ಲಿದ್ದಾರೆ, ರೇಸ್‌ಕೋರ್ಸಿಗೆ ಹೋಗಿದ್ದಾರಾ ಅವರನ್ನು ಎಲ್ಲಿದ್ದಾರೆ ಹುಡುಕೋಣವೆಂದು ಹೇಳಿದ್ದೇನೆ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ ನಾನು ಆ ರೀತಿ ಹೇಳಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷೀಣೀಯವರೆ, ಯಾವುದೇ ನೋಟೀಸ್ ಇಲ್ಲದೆ ಇದ್ದಕ್ಕಿದ್ದ ಹಾಗೆ ವಿಷಯವನ್ನು ತೆಗೆದರೆ ಮಂತ್ರಿಗಳು ಹೇಗೆ ಉತ್ತರವನ್ನು ಹೇಳಬೇಕು. ಮಂತ್ರಿಗಳು ಆ ಸದನದಲ್ಲಿ ಇರಬೇಕಾಗುತ್ತದೆ. ಆಗ ಇಲ್ಲಿ ಉತ್ತರಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಈ ವಿಚಾರದಲ್ಲಿ ಚರ್ಚೆ ನಡೆದಿದೆ. ಏನಾದರೂ ಇದ್ದರೆ ನನ್ನ ಗಮನಕ್ಕೆ ತಂದರೆ ಅಥವಾ ಅವರು ಸಲಹೆ ಕೊಟ್ಟರೆ ಏನಾದರೂ ಮಾಡಬಹುದು. ಬೆಂಗಳೂರುನಗರದ ವಿಚಾರದಲ್ಲಿ, ರಾಜ್ಯದ ಬೇರೆ ನಗರಗಳ ವಿಚಾರದಲ್ಲಿ ಆದಷ್ಟು ತೀವ್ರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ ಇನ್ನೇನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ತಾವು ಸಲಹೆಗಳನ್ನು ಕೊಡಿ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ರೈತರ ಪಂಪ್‌ಸೆಟ್ಟುಗಳ ವಿಷಯದಲ್ಲಿ ಸರ್ಕಾರದದ ಗಮನವನ್ನು ಸೆಳೆಯಲಾಗಿತ್ತು. ಸರ್ಕಾರ ಕೊಡಲಿಲ್ಲ.

ಉಪಾಧ್ಯಕ್ಷರು : ನೀವು ಬೇರೆ ರೂಪದಲ್ಲಿ ನೋಟಿಸ್ ಕಳುಹಿಸಿ, ನಾಳೆ ದಿವಸ ಅದನ್ನು ತೆಗೆದುಕೊಳ್ಳೋಣ.

## ಗಮನ ಸೆಳೆಯುವ ಸೂಚನೆಗಳು

**ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೊಬ್ಬರಿ ಹರಾಜು ಧಾರಣೆಯಲ್ಲಿ ಆಗುತ್ತಿರುವ ವ್ಯತ್ಯಾಸ.**

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಾಧ್ಯಕ್ಷರೇ. ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೊಬ್ಬರಿ ಹರಾಜು ಧಾರಣೆಯಲ್ಲಿ ಆಗುತ್ತಿರುವ ವ್ಯತ್ಯಾಸದ ಬಗ್ಗೆ ಮಾನ್ಯ ಸಹಕಾರ ಮಂತ್ರಿಯವರ ಗಮನ ಸೆಳೆಯುತ್ತೇನೆ.

+ ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿ) : ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ತಿಪಟೂರು ಮಾರುಕಟ್ಟೆಯಲ್ಲಿ ಧಾರಣೆಯು ಕೊಬ್ಬರಿಯ ಗಾತ್ರದ ಮೇಲೆ ಅವಲಂಬಿಸಿರುತ್ತದೆ. ಮಾರುಕಟ್ಟೆ ಪ್ರಾಂಗಣಕ್ಕೆ ಅವಕವಾಗುವ ಸಣ್ಣ ಮಧ್ಯಮ ಹಾಗೂ ದಪ್ಪ ಗಾತ್ರದ ಕೊಬ್ಬರಿಗೆ ಬೇರೆ ಬೇರೆ ರಾಜ್ಯಗಳ ವರ್ತಕರಿಂದ ಬೇಡಿಕೆ ಇರುತ್ತದೆ. ಸಣ್ಣ ಗಾತ್ರದ ಕೊಬ್ಬರಿಯನ್ನು ಪಂಜಾಬ್,ಹರಿಯಾಣ,ರಾಜ್ಯಗಳಲ್ಲಿ ಮಧ್ಯಮ ಗಾತ್ರದ ಕೊಬ್ಬರಿಯು ಉತ್ತರ ಪ್ರದೇಶ, ಬಿಹಾರ್ ಮತ್ತು ಗುಜರಾತ್ ರಾಜ್ಯ ಹಾಗೂ ದಪ್ಪ ಗಾತ್ರದ ಕೊಬ್ಬರಿಯು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಬೇಡಿಕೆ ಇದ್ದು ಸದರಿ ರಾಜ್ಯಗಳ ವರ್ತಕರಿಂದ ಬರುವ ಬೇಡಿಕೆ ಮತ್ತು ಅವಶ್ಯಕತೆಯನ್ನು ಅನುಸರಿಸಿ ಸ್ಥಳೀಯ ವರ್ತಕರು ಖರೀದಿ ಮಾಡುವರು. ಇದಲ್ಲದೆ ಮಾರುಕಟ್ಟೆ ಧಾರಣೆ ಪ್ರವೃತ್ತಿಯು ಪೂರೈಕೆ ಮತ್ತು ಬೇಡಿಕೆಯನ್ನು ಅವಲಂಬಿಸಿರುವುದರಿಂದ ತಿಪಟೂರು ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾಗುವ ಸಾಧ್ಯತೆಯಿರುತ್ತದೆ.

1990ರ ಜುಲೈ ತಿಂಗಳಿಂದ 1991ರ ಫೆಬ್ರುವರಿವರೆವಿಗೆ ಕೊಬ್ಬರಿ ಕ್ವಿಂಟಾಲ್ ಒಂದಕ್ಕೆ ಬಂದಿರುವ ಮಾದರಿ ಧಾರಣೆಯನ್ನು ಈ ಕೆಳಗೆ ಕಾಣಿಸಿದಂತೆ ಪರಿಶೀಲಿಸಿದಾಗ ಸದರಿ ಅವಧಿಯಲ್ಲಿ ಧಾರಣೆಯು ಏರುತ್ತಿರುವುದು ಕಂಡು ಬರುತ್ತದೆ.